# ಮಾಧ್ಯಮ ವಿರೋಧಿ ನೀತಿ ಮುಂದುವರಿಸಿದ ಸ್ಪೀಕರ್

**ಬೆಂಗಳೂರು:** ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಯವರ 'ಮಾಧ್ಯಮ ದಮನ' ನೀತಿ ಮತ್ತೆ ಮುಂದುವರಿದಿದ್ದು, ಸಿಎಂ ಬಜೆಟ್ ಭಾಷಣ ಮುಗಿಯುವವರೆಗೆ ಪ್ರತಿಪಕ್ಷ ಹಾಗೂ ಮಾಧ್ಯಮಕ್ಕೆ ಬಜೆಟ್ ಪ್ರತಿ ಕೊಡಬೇಡಿ ಎಂದು ಆದೇಶ ಮಾಡಿ ಮುಖಭಂಗಕ್ಕೆ ಒಳಗಾದರು. ಸ್ಪೀಕರ್ ವರ್ತನೆ ಬಗ್ಗೆ ಖುದ್ದು ಸಿಎಂ ಯಡಿಯೂರಪ್ಪ ಅವರೇ ಬೇಸರ ವ್ಯಕ್ತಪಡಿಸಿದ ಬಳಿಕ ಎಲ್ಲರಿಗೂ ಬಜೆಟ್ ಪ್ರತಿ ನೀಡಲಾಯಿತು.

ಸ್ಪೀಕರ್ ವರ್ತನೆಯಿಂದ ರಾಜ್ಯ ವಿಧಾನ ಮಂಡಲದ ಇತಿಹಾಸದಲ್ಲೇ ಮೊದಲ ಬಾರಿಗೆ ಬಜೆಟ್ ಮಂಡನೆ ವರದಿ ಮಾಡುವುದಿಲ್ಲ ಎಂದು ಮಾಧ್ಯಮ ಪ್ರತಿನಿಧಿಗಳು ಕಲಾಪ ಬಹಿಷ್ಕರಿಸಿದರು. ಪದ್ಧತಿಯಂತೆ ಬಜೆಟ್ ಪ್ರತಿ ನೀಡಿದರೆ ಮಾತ್ರ ವರದಿಗಾರಿಕೆಗೆ ಆಗಮಿಸುತ್ತೇವೆ ಎಂದು ಪತ್ರಕರ್ತರು ಪಟ್ಟು ಆ ಮೊದಲು ಹಿಡಿದರು. ಇದರಿಂದ ಸರಕಾರಕ್ಕೆ ತೀವ್ರ ಮುಜುಗರ ಉಂಟಾಯಿತು. ಬಳಿಕ ಸಿಎಂ ಸೂಚನೆ ಮೇರೆಗೆ ಸಚಿವರಾದ ಜೆ.ಸಿ.ಮಾಧುಸ್ವಾಮಿ ಹಾಗೂ ಸಿ.ಟಿ.ರವಿ ಸಂಧಾನ ಮಾಡಿ ಸಮಾಧಾನ ಮಾಡಿದರು. ಹೀಗಾಗಿ ಸ್ಪೀಕರ್ ಅವರ 'ವಿವೇಚನಾ ರಹಿತ ' ನಿರ್ಧಾರ ಪಕ್ಕಕ್ಕಿಟ್ಟ ಸರಕಾರ ಬಜೆಟ್ ಪ್ರತಿ ವಿತರಿಸಿತು. ಈ ಪ್ರಸಂಗದಿಂದಾಗಿ ಸ್ಪೀಕರ್ ಹಾಗೂ ಸಚಿವಾಲಯದ ಸಿಬ್ಬಂದಿಗೆ ತೀವ್ರ ಮುಜುಗರ ಎದುರಿಸಬೇಕಾಯಿತು.

**ಪರಂಪರೆ ಎಂದ ಸ್ಪೀಕರ್:** ಗುರುವಾರ ಬೆಳಗ್ಗೆ 9 ಗಂಟೆಯಿಂದಲೇ ಮಾಧ್ಯಮ ಪ್ರತಿನಿಧಿಗಳು ಬಜೆಟ್ ಪ್ರತಿಗಾಗಿ ಸಾಲುಗಟ್ಟಿ ನಿಂತಿದ್ದರು. 2 ತಾಸು ಸರತಿಯಲ್ಲಿ ನಿಂತ ಬಳಿಕ, ಮಧ್ಯಾಹ್ನ 1 ಗಂಟೆ ಬಳಿಕ ಕೊಡುವುದಾಗಿ ಸಚಿವಾಲಯ, ವಾರ್ತಾ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಇದರಿಂದ ಕೆರಳಿದ ವರದಿಗಾರರು ಕಲಾಪದ ವರದಿ ಮಾಡಲು ನಿರಾಕರಿಸಿದರು. ಕಲಾಪದಲ್ಲಿ ಕುಳಿತುಕೊಳ್ಳುವಂತೆ ಸಿಎಂ ಯಡಿಯೂರಪ್ಪ ಮನವಿ ಮಾಡಿದರೂ ಕೇಳಲಿಲ್ಲ. ಆ ಬಳಿಕವೂ ತಮ್ಮ ವರ್ತನೆ ಸಮರ್ಥಿಸಿಕೊಂಡ ಕಾಗೇರಿ "ಕಳೆದ ವರ್ಷವೂ ಸಿಎಂ ಭಾಷಣದ ಬಳಿಕವೇ ಪ್ರತಿ ನೀಡಲಾಗಿತ್ತು. ಇದೇನು ಹೊಸ ಪರಂಪರೆಯಲ್ಲ" ಎಂದರು. ಆಗ ಕಾಂಗ್ರೆಸ್ ಹಿರಿಯ ಸದಸ್ಯ ಆರ್.ವಿ.ದೇಶಪಾಂಡೆ, ಪ್ರಿಯಾಂಕ ಖರ್ಗೆ ಮೊದಲಾದವರು ಅದನ್ನು ಒಪ್ಪಲಿಲ್ಲ. ಬಳಿಕ ಅಧಿಕಾರಿಗಳು ಹಾಗೂ ಸ್ಪೀಕರ್ ಕಡೆ ಸಿಎಂ ಯಡಿಯೂರಪ್ಪ ತೀಕ್ಷ್ಣ ನೋಟ ಬೀರಿದರು. ಬಳಿಕ ಬಜೆಟ್ ಪ್ರತಿ ನೀಡಲಾಯಿತು.

**ಸರಿಯಾಗದ ವರ್ತನೆ:** ಬಜೆಟ್ ಭಾಷಣದ ಬಳಿಕ ಆರ್ಥಿಕ ಸಮೀಕ್ಷೆ ವರದಿ ನೀಡುವ ವೇಳೆಯೂ ಮಾಧ್ಯಮದವರನ್ನು ಸ್ಪೀಕರ್ ಸತಾಯಿಸಿದರು. ಸಂಸತ್ತಿನಲ್ಲಿ ಒಂದು ದಿನ ಮುಂಚಿತವಾಗಿ ಆರ್ಥಿಕ ಸಮೀಕ್ಷೆ ವರದಿ ನೀಡುತ್ತಾರೆ. ಎಲ್ಲದಕ್ಕೂ ಸಂಸತ್ ಮಾದರಿ ಎನ್ನುವ ನಿಮಗೆ ಈ ವಿಚಾರ ಅರ್ಥವಾಗುವುದಿಲ್ಲವೇ? ಎಂಬ ಪ್ರಶ್ನೆಗೆ ಸ್ಪೀಕರ್ ಕಚೇರಿ ನಿರುತ್ತರವಾಗಿತ್ತು.



**ಸಂಸತ್ ಹೆಸರಿನಲ್ಲಿ ಅಂಧಾದುಂಧಿ**

ಕಾಗೇರಿಯವರು ಸ್ಪೀಕರ್ ಸ್ಥಾನ ಅಲಂಕರಿಸಿದ ಬಳಿಕ ಸಂಸತ್ ಮಾದರಿಯ ನೆಪದಲ್ಲಿ ಮಾಧ್ಯಮದ ಸ್ವಾತಂತ್ರ್ಯ ಹರಣಕ್ಕೆ ಮಾರ್ಗಗಳನ್ನು ಅರಸುತ್ತಲೇ ಇದ್ದಾರೆ. ಇದಕ್ಕೆ ಸಚಿವಾಲಯದ ಕೆಲ ಅಧಿಕಾರಿಗಳೂ ಕೈ ಜೋಡಿಸಿದ್ದಾರೆ. ಇದರ ಮೊದಲ ಭಾಗವೆಂಬಂತೆ ಟಿವಿ ವಾಹಿನಿಗಳ ನೇರ ಪ್ರಸಾರದ ಹಕ್ಕು ಕಸಿದುಕೊಂಡು ಬಳಿಕ ಶಾಸಕರ ಭವನಕ್ಕೆ ಮಾಧ್ಯಮಗಳ ಪ್ರವೇಶ ನಿರ್ಬಂಧಿಸಿದ್ದರು. ಇದೀಗ ಪ್ರತಿಪಕ್ಷಗಳು ಹಾಗೂ ಮಾಧ್ಯಮದವರಿಗೆ ಬಜೆಟ್ ಪ್ರತಿ ನೀಡದಂತೆ ಸೂಚನೆ ನೀಡಿದ್ದರು. ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎ.ಎಸ್. ಎಸ್.ಪ್ರಸಾದ್ ಅವರೂ ಈ ಪ್ರಸ್ತಾಪಕ್ಕೆ ಬೆಂಬಲಿಸಿದ್ದರು ಎನ್ನಲಾಗಿದೆ.